**ಓ ಎಸ್ ನಂಃ 350/19**
**ಪಿ ಡಬ್ಲ್ಯೂ ಃ 1**

**ದಿಃ 04.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಎಸ್ ವಕೀಲರಿಂದಃ**

ನನ್ನ ತಾತನ ಹೆಸರು ಚೆನ್ನವೀರಯ್ಯ. ಚೆನ್ನವೀರಯ್ಯರವರ ತಂದೆಯ ಹೆಸರು ಈರಪ್ಪ. ಚೆನ್ನವೀರಯ್ಯ ಮತ್ತು ಈರಪ್ಪರವರು ಮೂಲತಃ ಯಲೆರಾಮಪುರ ಗ್ರಾಮದ ವಾಸಿಗಳು ಆಗಿರುತ್ತಾರೆ. ಈರಪ್ಪರವರಿಗೆ ನೀಲಗೊಂಡನಹಳ್ಳಿ ಗ್ರಾಮದಲ್ಲಿ 2 1/2 ಎಕರೆ ತೋಟ ಇದೆ. ಮುಕ್ಕಾಲು ಎಕರೆ ಗದ್ದೆ ಇರಬಹುದು. ಸದರಿ ಜಮೀನುಗಳ ಸರ್ವೆ ನಂಬರ್ ನನಗೆ ಈಗ ಗೊತ್ತಿಲ್ಲ. ಸದರಿ ಜಮೀನುಗಳಿಗೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಈರಪ್ಪರವರು ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದರು. ಚೆನ್ನವೀರಯ್ಯರವರು ಸಹ ವ್ಯವಸಾಯ ವೃತ್ತಿಯನ್ನು ಮಾಡುತ್ತಿದ್ದರು. ಚೆನ್ನವೀರಯ್ಯರವರ ಹೆಸರಿನಲ್ಲಿರುವ ಜಮೀನುಗಳ ಸರ್ವೆ ನಂಬರ್ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚೆನ್ನವೀರಯ್ಯರವರಿಗೆ ಸೇರಿದ ಸ್ವತ್ತುಗಳು ಯಲೆರಾಮಪುರ ಗ್ರಾಮದಲ್ಲಿವೆ. ದಾವ ಸ್ವತ್ತಿಗೆ ಸಂಬಂದಪಟ್ಟಂತೆ ಚೆನ್ನವೀರಯ್ಯರವರ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನಾನು ಎಲ್ಲಾ ವಾದಿಗಳ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ಉಳಿದ ವಾದಿಗಳ ಪರವಾಗಿ ಸಾಕ್ಷ್ಯ ನುಡಿಯಲು ಅವರು ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗಳಾದ ನಾವು ನಮ್ಮ ನಮ್ಮ ಗಂಡಂದಿರ ಮನೆಗಳಲ್ಲಿ ಪ್ರತ್ಯೇಕವಾಗಿ ವಾಸಮಾಡುತ್ತಿದ್ದೇವೆ. ನಿಪಿ 1ರ ವಂಶವೃಕ್ಷವನ್ನು ಯಾರ ಹೇಳಿಕೆಯ ಮೇರೆಗೆ ಬರೆಸಲಾಗಿದೆ ಎಂದರೆ ವಾದಿಗಳಾದ ನಮ್ಮಗಳ ಹೇಳಿಕೆಯ ಮೇರೆಗೆ ಬರೆಸಿರುತ್ತೇವೆ. ನಿಪಿ 1ರ ವಂಶವೃಕ್ಷದಲ್ಲಿ ವಾದಿಗಳ ಸಹಿಗಳು ಇರುವುದಿಲ್ಲ ಎಂದರೆ ಸರಿ. ನಿಪಿ1ರ ವಂಶವೃಕ್ಷವನ್ನು ಯಾರ ಹೇಳಿಕೆ ಮೇರೆಗೆ ತಯಾರು ಮಾಡಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ.

ತಮ್ಮ ತಂದೆ ವೀರಭದ್ರಯ್ಯರವರಿಗೆ ಎಷ್ಟು ಜನ ಹೆಂಡತಿಯರು ಎಂದರೆ ನಮ್ಮ ತಾಯಿ ಮರಣ ಹೊಂದಿದ ನಂತರ, ನಮ್ಮ ತಾಯಿಯ ತಂಗಿಯನ್ನು ನಮ್ಮ ತಂದೆಯವರು ಎರಡನೇ ಮದುವೆಯನ್ನು ಮಾಡಿಕೊಂಡಿರುತ್ತಾರೆ. ನಮ್ಮ ತಂದೆಯವರು ವ್ಯಾಪಾರವನ್ನು ಮಾಡುತ್ತಿದ್ದರು ಮತ್ತು ವ್ಯವಸಾಯವನ್ನು

ಸಹ ಮಾಡುತ್ತಿದ್ದರು. ತಮ್ಮ ತಂದೆಯವರು ಯಾವ ವ್ಯಾಪಾರ ಮಾಡುತ್ತಿದ್ದರು ಎಂದರೆ ನಮ್ಮ ತಂದೆಯವರು ಒಂದೊಂದು ಕಾಲದಲ್ಲಿ ಒಂದೊಂದು ವ್ಯಾಪಾರವನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ತಮ್ಮ ತಂದೆಯವರು ವ್ಯಾಪಾರವನ್ನು ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯವರು ಯಲೆರಾಮಪುರ ಗ್ರಾಮದಲ್ಲಿರುವ ಜಮೀನುಗಳಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರು. ನಮ್ಮ ತಂದೆಯವರಿಗೆ ತೋಟ ಮತ್ತು ಗದ್ದೆ ಬಿಟ್ಟು ಬೇರೆ ಯಾವ ಜಮೀನು ಇರುವುದಿಲ್ಲ. ದಾವ ಆಸ್ತಿಗಳಲ್ಲಿ ಬರುವ ಆದಾಯ ತಮ್ಮ ಕುಟುಂಬದ ಪೋಷಣೆಗೆ ಸರಿ ಹೋಗುತ್ತಿತ್ತು ಎಂದರೆ ಸರಿ.

ಶಾಂತಪ್ಪರವರು ನನಗೆ ದೊಡ್ಡಪ್ಪ ಆಗಬೇಕು. ಚಿಕ್ಕವೀರಪ್ಪರವರು ನನಗೆ ಚಿಕ್ಕಪ್ಪ ಆಗಬೇಕು. ನಮ್ಮ ಕುಟುಂಬದಲ್ಲಿ ನಮ್ಮ ತಂದೆ ಮತ್ತು ಸಹೋದರರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ. ಶಾಂತಪ್ಪ ಮತ್ತು ಚಿಕ್ಕವೀರಪ್ಪರವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಅವರು ಈಗಾಗಲೇ ಮರಣ ಹೊಂದಿದ್ದು ಅವರಿಗೆ ಯಾವುದೇ ಸಂತತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**